ಅರಳಿ ಕೊಳ್ಳಲು ರಾಜ್ಯ ಜವಳಿ ಉದ್ದಿಮೆ ಮಹಾ ಮಂಡಲದಿಂದ 80 ಲಕ್ಷ ರೂಪಾಯಿ ಸಹಾಯಧನ ಕೊಡಿಸುವುದಾಗಿಯೂ ತಿಳಿದುಬಂದಿದೆ. ಸರ್ಕಾರದ ಈ ನಿರ್ಧಾರಗಳನ್ನು ಪತ್ರಿಕೆಗಳಲ್ಲೂ ಆಕಾಶವಾಣಿಯಲ್ಲಿಯೂ ಪ್ರಚಾರಪಡಿಸಲಾಯಿತು. ಆದರೆ ಇದುವರೆವಿಗೂ ಮಂತ್ರಿಮಂಡಲದ ತೀರ್ಮಾನ ಜಾರಿಗೆ ಬಂದಿಲ್ಲ. ಇದರಿಂದ ಕಾರ್ಮಿಕರು ಕಂಗಾಲಾಗಿದ್ದಾರೆ. ತೀವ್ರ ಅತೃಪ್ತಿ ಬೆಳೆಯುತ್ತಿದೆ. ಆಗಸ್ಟ್ 5, 1985ರಂದು ಬೆಂಗಳೂರಿಗೆ ಬಂದು ವಿಧಾನ ಸೌಧದ ಮುಂದೆ ಪಿಕೆಟಿಂಗ್ ನಡೆಸಲು ನಿರ್ಧರಿಸಿದ್ದಾರೆ. ಜೈಲಿಗಾದರೂ ಹೋದರೆ ಒಳ್ಳೆಯದು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಈ ಮುಖ್ಯ ವಿಷಯದ ಬಗ್ಗೆ ಮಂತ್ರಿಗಳ ಹೇಳಿಕೆ ಅತ್ಯವಶ್ಯಕ.

ಶ್ರೀ ಆರ್. ಎಲ್. ಜಾಲಪ್ಪ.—ಈ ಒಂದು ಸಹಕಾರಿ ನೂಲಿನ ಗಿರಣಿಯಲ್ಲಿ ಹನ್ನೆರಡೂವರೆ ಸಾವಿರ ಸ್ಪಿಂಡಲ್ ಮಾಡಲು ಅವಕಾಶ ಇತ್ತು. ಇದು ಲಾಭದಾಯಕವಾಗಿ ನಡೆಯುತ್ತಿಲ್ಲವೆಂದು ಅದನ್ನು 25 ಸಾವಿರ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡು ಮುಕ್ಕಾಲು ಭಾಗ ಮುಗಿದಿದೆ. ಒಂದು ಕೋಟಿ 40 ಲಕ್ಷ ರೂಪಾಯಿ ಲುಕ್ಸಾನಾಗಿದೆ. ಅಲ್ಲಿ 700 ಜನರಿಗಿಂತ ಹೆಚ್ಚಾಗಿ ಕಾರ್ಮಿಕರು ಇದ್ದಾರೆ. ಹನ್ನೆರಡೂವರೆ ಸಾವಿರ ಸ್ಪಿಂಡಲ್‌ನಲ್ಲಿ ಕೆಲಸ ಮಾಡಲು ಅಷ್ಟುಮಂದಿ ಬೇಕಾಗಿರಲಿಲ್ಲ. ಅಲ್ಲಿ ಯಾವುದೇ ಸಹಕಾರಿ ಕಾರ್ಖಾನೆಯಲ್ಲಿ ಕೊಡುವುದಕ್ಕಿಂತ ಹೆಚ್ಚಿಗೆ ಸಂಬಳ ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕ್ಯಾಬಿನೆಟ್‌ನಲ್ಲಿ ಕೂಡ ಒಂದು ತೀರ್ಮಾನ ತೆಗೆದುಕೊಂಡಿದೆ. ರಾಜ್ಯದ ಜವಳಿ ಉದ್ದಿಮೆ ಮಹಾ ಮಂಡಳಿಯಿಂದ 80 ಲಕ್ಷ ರೂಪಾಯಿಗಳನ್ನು ಕೊಡಿಸಬೇಕೆಂದು ಸುತ್ತು 50 ಲಕ್ಷ ರೂಪಾಯಿಗಳನ್ನು ವರ್ಕಿಂಗ್ ಕ್ಯಾಪಿಟಲ್ ಆಗಿ ಕೊಡಬೇಕೆಂದು ತೀರ್ಮಾನಮಾಡಿದ್ದೇವೆ. ಇಲ್ಲಿ ತೊಂದರೆ ಬಂದಿರುವುದು ಕಾರ್ಮಿಕರದ್ದು. ಆ ಬಗ್ಗೆ ಅವರಿಗೂ ಹೇಳಿದೆವು, ನೀವು ಈಗಿರುವ ಕೆಲಸವನ್ನು ಮಾಡದಿದ್ದರೆ ಕಾರ್ಖಾನೆಯನ್ನು ನಡೆಸುವುದಕ್ಕಾಗುವುದಿಲ್ಲವೆಂದು. ಈ ವಿಚಾರವನ್ನು ಟೆಕ್ನಿಕಲ್ ಆಫೀಸರ್ಸ್ ಮುಂದೆ ಕಳುಹಿಸಿ ಅವರ ಜೊತೆ ಚರ್ಚೆಮಾಡಿ ವರ್ಕ್‌ಲೋಡ್ ಎಷ್ಟಿರಬೇಕೆಂಬುದನ್ನು ಒಪ್ಪಿಕೊಳ್ಳಿ ಎಂದು ಹೇಳಿದ್ದೆವು. ಅವರು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ನಿನ್ನೆ ಸುದ್ದಿ ಬಂದಿದೆ, ಒಪ್ಪಿಕೊಂಡಿದ್ದಾರೆಂದು. ನನಗಿನ್ನೂ ಅಧಿಕೃತವಾಗಿ ಬಂದಿಲ್ಲ. ಕಾರ್ಮಿಕರು ಒಪ್ಪಿಕೊಂಡಿದ್ದರೆ ಗಿರಣಿಯನ್ನು ನಡೆಸುತ್ತೇವೆ ; ಇಲ್ಲದಿದ್ದರೆ ಗಿರಣಿಯನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

(4) ಮಡಿಕೇರಿ ಪ್ರಥಮ ದರ್ಜೆ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕರಿಲ್ಲದೆ ತೊಂದರೆ.

Sri D A. Chinnappa.—The Principal, Government First Grade College, Madikeri is unable to run the above college for want of five Readers, Six Lecturers in various subjects and sixteen non-teaching staff in addition to four additional teaching staff asked for. One post of Reader in Mathematics has also been shifted to Bangalore. Though the Principal has requested for posting the staff no action has been taken so far. Hence this notice.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ಮಾಹಿತಿ ಇಲ್ಲ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆಂದು ಹೇಳಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾವು ನಿಮ್ಮ ಸಹಾಯಕ್ಕೆ ಬರುತ್ತಿದ್ದೇವೆ, ಆದೇ ಮಂತ್ರಿ, ಇದೇ ಮಂತ್ರಿ ಇರಬೇಕೆಂದು ಇಲ್ಲ. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿಗೆ ಬೇರೆ ಮಂತ್ರಿಗಳ ಪರವಾಗಿ ಉತ್ತರ ಕೊಡತಕ್ಕ ಅಧಿಕಾರ ಇದೆ ಮತ್ತು ಜವಾಬ್ದಾರಿ ಕೂಡ ಇದೆ. ಅವರು ನನಗೆ ಗೊತ್ತಿಲ್ಲವೆಂದು ಹೇಳಿದರೆ ಬಹಳ ನಾಚಿಕೆಗೇಡಿನ ವಿಚಾರವಾಗುತ್ತದೆ.

ಅಧ್ಯಕ್ಷರು.—ಅವರು ಹಾಗೆ ಹೇಳಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು.—ನಾವು ಕೇಳುವ ಉದ್ದೇಶ ಸರ್ಕಾರದ ತಿಳುವಳಿಕೆಗೆ ಬರಬೇಕು.

ಅಧ್ಯಕ್ಷರು.—ನೀವು ಮಾತನಾಡಿದ್ದು ರೆಕಾರ್ಡಿಗೆ ಹೋಗುವುದಿಲ್ಲ ; ಕುಳಿತುಕೊಳ್ಳಿ, ಸಭೆಯ ಕಾರ್ಯಕಲಾಪವನ್ನು ಸರಿಯಾದ ರೀತಿಯಲ್ಲಿ ನಡೆಸಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಚಿನ್ನಪ್ಪನವರು ಒಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವುದರಿಂದ ಕಾನೂನು ಸಚಿವರು ಉತ್ತರ ಹೇಳಬೇಕೆಂದು ಹೇಳಿದರು, ಇದಕ್ಕೋಸ್ಕರ

ಪ್ರಶ್ನೆ ಕೇಳಬೇಕೇ ? ನಾವು ವಿತಕ್ಕೆ ಅಸೆಂಬ್ಲಿಗೆ ಬಂದಿದ್ದೇವೆ ? ದಯಮಾಡಿ ಹೇಳಿ. ನಮ್ಮ ಕ್ಷೇತ್ರದಲ್ಲಿರ ತಕ್ಕ ಕುಂದುಕೊರತೆಗಳಿಗೆ ಸಮಜಾಯಿಷಿ ಉತ್ತರ ಸಿಗಬಹುದೆಂದು ಬಂದಿದ್ದೇವೆ.

ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕೆಂದು ತಾವೇ ಹೇಳಿಕೊಟ್ಟರೆ, ಮಂತ್ರಿಗಳು ಅದೇ ರೀತಿ ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಆಯವ್ಯಯದ ಮೇಲಿನ ಚರ್ಚೆದುನ್ನು ತೆಗೆದು ಕೊಳ್ಳಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಸಭೆಯ ಸತ್-ಸಂಪ್ರದಾಯಗಳನ್ನು ಕಾಪಾಡಬೇಕಾಗಿದೆ. ಆದ್ದರಿಂದ ಸರ್ಕಾರದವರಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಾಗದಿದ್ದರೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಸರ್ಕಾರಕ್ಕೆ ನಾನೂ ಸಲಹೆ ಕೊಡಬಹುದು ಮತ್ತು ತಾವೂ ಸಹ ಸಲಹೆ ಕೊಡ ಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಇದನ್ನು ಜಾಗ್ರತೆ ಮುಗಿಸಬೇಕಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ 334ರ ಕೆಳಗೆ ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಉತ್ತರ ತಯಾರಿದ್ದರೆ ಕೊಡುತ್ತೇವೆ. ಇಲ್ಲದಿದ್ದರೆ ಸಮಯ ಕೇಳುತ್ತೇವೆ. ಮತ್ತೊಂದು ದಿನ ಉತ್ತರ ಕೊಡುತ್ತೇವೆ.

ಅಧ್ಯಕ್ಷರು.—ಈಗ ಶ್ರೀ ಬಿ. ಆರ್. ನೀಲಕಂಠಪ್ಪನವರ ಪ್ರಶ್ನೆ.

(ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

(5) ರಾಣೆಬೆನ್ನೂರು ತಾಲ್ಲೂಕು ಗುಡ್ಡಾಪುರದಲ್ಲಿ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಮನೆಗಳನ್ನು ಕಟ್ಟುವುದು.

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ರಾಣೇಬೆನ್ನೂರ ತಾಲ್ಲೂಕ್ ಗುಡ್ಡಾಪುರ ಗ್ರಾಮದಲ್ಲಿ ಸರಕಾರಿ ಹಾಗೂ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಎಲ್ಲ ಕಾನೂನುಗಳನ್ನು ಉಲ್ಲಂಘಿಸಿ ಮನೆಕಟ್ಟಲು, ಕಂದಾಯ ನಿರೀಕ್ಷಕ ಮತ್ತು ಅದೇ ಗ್ರಾಮದ ಪಂಚಾಯಿತಿ ಆಡಳಿತಾಧಿಕಾರಿಯು ಜನರಿಗೆ ಪ್ರೋತ್ಸಾಹಿಸುವುದಲ್ಲದೆ ಕುಡಿಯುವ ನೀರಿನ ಪೈಪುಗಳನ್ನು ಒಡೆದು ಮನೆಕಟ್ಟಲು ನೀರು ಕೊಡುತ್ತಿರುವು ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲದೆ ಸದರಿ ಅಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಬೇಕೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೋಳಿವಾಡ್ ಅವರು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾನು ಕೊಡಲೇ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಅದರ ಮೇಲೆ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

(6) ವಿಧಾನಸೌದದ ಮುಂಭಾಗದಲ್ಲಿ ಸ್ಥಾಪಿಸಿದ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಬಗ್ಗೆ ಅಸಮಾಧಾನ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ವಿಧಾನಸೌಧದ ಮುಂಭಾಗದಲ್ಲಿ ನಿಲ್ಲಿಸಿರುವ ಡಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಸಮರ್ಪಕವಾಗಿಲ್ಲದಿರುವ ಬಗ್ಗೆ ಹಲವಾರು ಈಗಾಗಲೇ ಅಸಮಾಧಾನ ವ್ಯಕ್ತ ಮಾಡಿದ್ದಾರೆ. ಕೆಂಗಲ್ ಹನುಮಂತಯ್ಯನವರ ಹೋಲಿಕೆಯೇ ಇಲ್ಲದ ಇಂತಹ ಪ್ರತಿಮೆಯನ್ನು ನಿರ್ಮಿಸಿ ವಿಧಾನಸೌಧದ ಮುಂದೆ ತಂದು ನಿಲ್ಲಿಸಿ, ರಾಷ್ಟ್ರಪತಿ ಶ್ರೀಯುತ ಜೈಲ್‌ಸಿಂಗ್ ಅವರಿಂದ ಅನಾವರಣಗೊಳಿಸಿದ ಅನುಚಿತ ಕೆಲಸಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಹಾಗೂ ತೃಪ್ತಿಕರವಾದ ಬದಲಿ ಪ್ರತಿಮೆಯನ್ನು ನಿರ್ಮಿಸಿ ಸ್ಥಾಪಿಸಲು ತತ್‌ಕ್ಷಣ ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಸದರಿ ವಿಷಯದ ಬಗ್ಗೆ ಇದೇ ತಿಂಗಳು 15ನೇ ತಾರೀಖು ನಮ್ಮ ಬೆಂಗಳೂರು ನಗರಸಭೆಯ ಮಾಜಿ ಮೇಯರ್‌ಗಳಾದ ಶ್ರೀ ಲಿಂಗಯ್ಯನವರು, ಶ್ರೀ ತಿವಾರಿ ಅವರು, ಶ್ರೀ ಕೆ. ಎಂ. ನಂಜಪ್ಪನವರು, ಶ್ರೀ ತಿಮ್ಮರಾಯಿಗೌಡರು, ಶ್ರೀ ವಿ.ಆರ್. ನಾಯ್ಡು ಅವರು, ಶ್ರೀ ಎ. ಕೆ. ಅನಂತಕೃಷ್ಣ ಅವರು ಹಾಗೂ ಇತರರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪ್ರಸ್ತಾಪ ಮಾಡಿದರು. ಅನಂತರ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಶ್ರೀ ಲಿಂಗಯ್ಯ